# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 816 |
| ಸದಸ್ಯರ ಹೆಸರು | : | ಶ್ರೀ ಕೆ.ಟಿ.ಶ್ರೀಕಂಠೇಗೌಡ |
| ಉತ್ತರಿಸುವ ದಿನಾಂಕ | : | 09-03-2021 |
| ಉತ್ತರಿಸುವ ಸಚಿವರು | : | ಸಹಕಾರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಲ್ಲಿ ನಿಯಮ 32 ರಡಿ ವಿವಿಧ ವೃಂದದ ಅಧಿಕಾರಿಗಳಿಗೆ ಪದೋನ್ನತಿಯನ್ನು ನೀಡಬೇಕಾದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆಯೇ; (ವಿವರ ನೀಡುವುದು) | ಹೌದು.<br><br>ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಅಧಿಕಾರಿಗಳನ್ನು ಸ್ವತಂತ್ರ ಪ್ರಭಾರದಲ್ಲಿ ಇರಿಸಲು ಅವಕಾಶವಿದ್ದು, ಈ ಅವಕಾಶದನ್ವಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದೋನ್ನತಿಗೆ ಅರ್ಹರಿರುವ ಅಧಿಕಾರಿ / ನೌಕರರನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆ. |
| ಆ) | ಈ ತಹಲ್ ವರೆಗೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘನೆ ಮಾಡಿ ಯಾವುದೇ ಹುದ್ದೆಗೆ ನಿಯಮ 32 ರಡಿಯಲ್ಲಿ ಪದೋನ್ನತಿಯನ್ನು ನೀಡಲಾಗಿದೆಯೇ; (ವಿವರ ನೀಡುವುದು) | ಇಲ್ಲ.<br><br>ಇಲಾಖೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದ್ದು, ಇದು ಪದೋನ್ನತಿ ಆಗಿರುವುದಿಲ್ಲ, ಬದಲಿಗೆ ತಾತ್ಕಾಲಿಕ ಕಾರ್ಯ ನಿರ್ವಹಣಾ ವ್ಯವಸ್ಥೆಯಾಗಿರುತ್ತದೆ. |
| ಇ) | ಇಲಾಖೆಯಲ್ಲಿನ ವಿವಿಧ ವೃಂದದ ಹುದ್ದೆಗಳಿಗೆ ನಿಯಮ-32 ರಡಿ ಪದೋನ್ನತಿ ನೀಡಿದ್ದು, ನಂತರ ಮುಂದಿನ ಹುದ್ದೆಗೆ ಪದೋನ್ನತಿ ನೀಡುವಾಗ ನಿಯಮ-32 ರಡಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಲಾಗುತ್ತಿದೆಯೇ? (ವಿವರ ನೀಡುವುದು) | ಇಲ್ಲ. |
| ಈ) | ನಿಯಮ-32 ರಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯನ್ನು ಮುಂದಿನ ಹುದ್ದೆಯ ಪದೋನ್ನತಿಗೆ ಅರ್ಹ ಸೇವಾ ಅವಧಿಯೆಂದು ಪರಿಗಣಿಸಬೇಕೆಂದು ಇಲಾಖೆಯಲ್ಲಿ ರಚಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದೆಯೇ; (ವಿವರ ನೀಡುವುದು) | ಇಲ್ಲ. |

| | | |
|---|---|---|
| ಉ) | ಸಿ.ಡಿ.ಒ ಗಳ ಜೇಷ್ಠತಾ ಪಟ್ಟಿ ಉಲ್ಲಂಘನೆ ಮಾಡಿ ಎಂ.ಆರ್.ಸಿ.ಎಸ್ ಹುದ್ದೆಗೆ ಪದೋನ್ನತಿ ನೀಡಿರುವ ಕುರಿತು ಸರ್ಕಾರದ ಹಂತದಲ್ಲಿ ನಿರ್ವಹಿಸಿರುವ ಕಡತ' ಸಂಖ್ಯೆ: ಸಇ 336 ಎಸಸೇ 2016 ಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಪದೋನ್ನತಿಯಲ್ಲಿ ಅನ್ಯಾಯವಾಗಿರುವ ಅಧಿಕಾರಿಗಳಿಗೆ ನ್ಯಾಯ ಒದಗಿಸಿ ಎಂ.ಆರ್.ಸಿ.ಎಸ್ ಹುದ್ದೆಗೆ ನಿಯಮ-32 ರಡಿ ಪದೋನ್ನತಿ ನೀಡಿರುವುದಿಲ್ಲವೇ (ಪೂರ್ಣ ವಿವರ ನೀಡುವುದು) | ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪಾಲಿಸಿ ಪದೋನ್ನತಿ ನೀಡಲಾಗುತ್ತಿದೆ. ಸಹಕಾರ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಉಲ್ಲಂಘನೆ ಮಾಡಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಸ್ಥಾನವನ್ನು ಪದೋನ್ನತಿ ನೀಡಿರುವುದಿಲ್ಲ.<br><br>ಇಲಾಖೆಯಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದ್ದು, ಇದು ಪದೋನ್ನತಿಯಾಗಿರುವುದಿಲ್ಲ, ಬದಲಿಗೆ ತಾತ್ಕಾಲಿಕ ವ್ಯವಸ್ಥೆಯಾಗಿರುತ್ತದೆ.<br><br>ಸಹಕಾರ ಅಭಿವೃದ್ಧಿ ಅಧಿಕಾರಿ ವೃಂದದಿಂದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವೃಂದಕ್ಕೆ ಸ್ಥಾನವನ್ನು ಪದೋನ್ನತಿ/ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ 18 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವ ಅಧಿಕಾರಿಗಳನ್ನು ಪರಿಗಣಿಸಬೇಕಾಗಿದ್ದು ಅದರಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ, ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ. |

ಸಂಖ್ಯೆ: ಸಿಒ 51 ಇಸಿಎ 2021

**(ಎಸ್.ಟಿ.ಸೋಮಶೇಖರ್)**

ಸಹಕಾರ ಸಚಿವರು